**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 7/2015**

**ದೋ.ಸಾ. : 3 ಫ್ರಾ.ಸಾ. : 2**

| | |
|---|---|
| ಸಾಕ್ಷಿಯ ಹೆಸರು | : ದಿವಾಕರ |
| ತಂದೆಯ ಹೆಸರು | : ಮಲ್ಲಾರಾವ್ ಕುಲಕರ್ಣಿ |
| ವಯಸ್ಸು | : 37 ವರ್ಷ |
| ಉದ್ಯೋಗ | : ಕಿರಿಯ ಸಹಾಯಕ, ಹೆಸ್ಕಾಂ, ಹಾವೇರಿ |
| ವಾಸ | : ಹಾವೇರಿ |

**ದಿನಾಂಕಃ 14-07-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು 2011 ರಿಂದ 2014 ರವರಿಗೆ ನಾನು ಕಾರವಾರದಲ್ಲಿ ಹೆಸ್ಕಾಂ ಕಚೇರಿಯಲ್ಲಿ ಕಿರಿಯ ಸಹಾಯಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕಃ 16.09.2013 ರಂದು ನಮ್ಮ ಕಚೇರಿಗೆ ಲೋಕಾಯುಕ್ತ ಕಚೇರಿಯಿಂದ ಪಂಚರನ್ನಾಗಿ ಯಾರನ್ನಾದರೂ ಕಳುಹಿಸುವಂತೆ ಪತ್ರ ಬಂದಿತ್ತು . ನಮ್ಮ ಕಚೇರಿಯ ಹಿರಿಯ ಸಹಾಯಕರು ನನಗೆ ಪಂಚ ಸಾಕ್ಷಿಯಾಗಿ ಲೋಕಾಯುಕ್ತ ಕಚೇರಿಗೆ ಹೋಗುವಂತೆ ನಿರ್ದೇಶಿಸಿದರು . ನಾನು ಅಲ್ಲಿಗೆ ಹೋದಾಗ ದರ್ಶನ ನಾಯ್ಕ (ಫ್ರಾಸಾ-1) ರವರು ಪಂಚರಾಗಿ ಸೆಲ್ಟ್ ಟ್ಯಾಕ್ಸ್ ಇಲಾಖೆಯಿಂದ ಬಂದಿದ್ದರು . ಅಲ್ಲಿ ಫಿರ್ಯಾದುದಾರ ಮೊದಲೇ ಹಾಜರು ಇದ್ದ . ಅಲ್ಲಿ ಸುಮಾರು ಜನ ಲೋಕಾಯುಕ್ತ ಸಿಬ್ಬಂದಿ ಇದ್ದರು . ಲೋಕಾಯುಕ್ತ ಉಪಾಧೀಕ್ಷಕರು ಸಹ ಇದ್ದರು . ರಾಮಾ ನಾಯ್ಕ ಎಂಬುವವರು ಫಿರ್ಯಾದನ್ನು ನೀಡಿದ್ದಾರೆ , ಗಣೇಶ ನಾಯ್ಕ ವಿರುದ್ಧ ಆತನು ಲಂಚ ಕೇಳಿದ್ದಾನೆ ಎಂದು ದೂರು ನೀಡಿದ್ದಾರೆ ಎಂದು ಉಪಾಧೀಕ್ಷಕರು ತಿಳಿಸಿದರು . ರೂ. 5,000/- ಅನ್ನು ಅವರು ಕೇಳಿದ್ದು ನಂತರ ರೂ . 3,000/- ಕೊಡುವಂತೆ ಕೇಳಿರುತ್ತಾರೆ ಎಂದು ತಿಳಿಸಿದರು . ಆ ದೂರನ್ನು ಉಪಾಧೀಕ್ಷಕರು ಓದಿ ಹೇಳಿದರು . ಅದಕ್ಕೆ ನಾನು ರುಜು ಮಾಡಿಲ್ಲ ಆ ದೂರನ್ನು ನೋಡಿದರೆ ನಾನು ಗುರುತಿಸುತ್ತೇನೆ . ನಂತರ ಅಲ್ಲಿ ಹಾಜರಿದ್ದ ಫಿರ್ಯಾದುದಾರ ರಾಮಾ ನಾಯ್ಕ ಲಂಚಕ್ಕಾಗಿ ಕೊಡಬೇಕಾದ ರೂ . 3,000/- ಅನ್ನು ಹಾಜರು ಪಡಿಸಿದ . ಆ ಹಣವನ್ನು ಪಂಚ ಒಂದುರವರಿಗೆ ಕೊಟ್ಟರು. ನಾನು ಪಂಚ ಎರಡು ಎಂದು ಹೇಳಿದರು . ಆ ಹಣದಲ್ಲಿ ರೂ. 1,000/- ಎರಡು ನೋಟು ಮತ್ತು ರೂ. 500/- ರ ಎರಡು ನೋಟು ಇದ್ದವು . ಆ ನೋಟುಗಳನ್ನು ಪಂಚ ಒಂದು ರವರು ಎಣಿಸಿ ಆ

ನೋಟುಗಳ ಸಂಖ್ಯೆಗಳನ್ನು ಬರೆದುಕೊಂಡರು . ಆ ನಡವಳಿಕೆ ಆಗುತ್ತಿದ್ದಂತೆ ಅದನ್ನೆಲ್ಲಾ ಲೋಕಾಯುಕ್ತ ಪೊಲೀಸ್ ನವರು ಬರೆದುಕೊಳ್ಳುತ್ತಿದ್ದರು . ಆ ನೋಟುಗಳಿಗೆ ಪಂಚ ಒಂದುರವರಿಂದ ರಾಸಾಯನಿಕ ಪುಡಿಯನ್ನು ಲೇಪನ ಮಾಡಿಸಿದರು . ನಂತರ ಆ ಹಣವನ್ನು ಒಂದು ಲಕೋಟೆಯಲ್ಲಿ ಇರಿಸಿದರು . ನಂತರ ಅದನ್ನು ಪಂಚ ಒಂದುರವರ ಕಡೆಯಿಂದ ಫಿರ್ಯಾದುದಾರರ ಅಂಗಿಯ ಮೇಲಿನ ಕಿಸೆಯಲ್ಲಿ ಇರಿಸಿದರು . ಪಂಚ ಒಂದುರವರ ಎರಡೂ ಕೈ ಬೆರಳುಗಳನ್ನು ಮತ್ತೊಂದು ರಾಸಾಯನಿಕ ದ್ರವದಲ್ಲಿ ಅದ್ದಿಸಿದರು . ಆಗ ಆ ದ್ರವ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು . ಆಗ ಉಪಾಧೀಕ್ಷಕರು ಆ ರಾಸಾಯನಿಕ ಪ್ರಕ್ರಿಯೆ ಬಗ್ಗೆ ನಮಗೆ ವಿವರಿಸಿ ಹೇಳಿದರು . ಆ ಬಗ್ಗೆ ಪಂಚನಾಮೆ ಬರೆದರು . ನಾನು ಅದಕ್ಕೆ ರುಜು ಮಾಡಿರುತ್ತೇನೆ . ನಾನು ಆ ಪಂಚನಾಮೆಯನ್ನು ಮತ್ತು ಅದರಲ್ಲಿ ನನ್ನ ರುಜುವನ್ನು ಗುರುತಿಸುತ್ತೇನೆ . ನಂತರ ಬಣ್ಣ ತಿರುಗಿದ ದ್ರವವನ್ನು ಒಂದು ಬಾಟಲಿಯಲ್ಲಿ ಸಂಗ್ರಹಿಸಿ ಮೊಹರು ಹಾಕಿ ಜಪ್ತು ಮಾಡಿದರು. ನಾನು ಆ ಬಾಟಲಿಯನ್ನು ನೋಡಿದರೆ ಗುರುತಿಸುತ್ತೇನೆ. ಅದಕ್ಕೆ ಅಂಟಿಸಿದ ಚೀಟಿಯಲ್ಲಿ ನಾನು ರುಜು ಮಾಡಿದ್ದೇನೆ . ಅದೇ ರೀತಿ ಎರಡು ರಾಸಾಯನಿಕಗಳ ಮಾದರಿಯನ್ನು ಬೇರೆ ಬೇರೆ ಎರಡು ಲಕೋಟೆಗಳಲ್ಲಿ ಮೊಹರು ಮಾಡಿ ಜಪ್ತು ಮಾಡಿದರು . ಅವುಗಳ ಮೇಲೆ ಸಹ ನಾನು ರುಜು ಹಾಕಿರುತ್ತೇನೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ನಂತರ ಮಧ್ಯಾಹ್ನ ಅದೇ ದಿನ ನಮ್ಮನ್ನು ಲೋಕಾಯುಕ್ತ ವಾಹನದಲ್ಲಿ ಕುಮಟಾಕ್ಕೆ ಕರೆದುಕೊಂಡು ಹೋದರು . ಅಲ್ಲಿ ಯಾವುದೋ ಪ್ರೌಢಶಾಲೆಯ ವೃತ್ತದ ಬಳಿ ವಾಹನ ನಿಲ್ಲಿಸಿದ್ದರು. ಆ ಶಾಲೆಯ ಹೆಸರು ನನಗೆ ನೆನಪಿಲ್ಲ. ಅಲ್ಲಿಂದ ಪಂಚ ಒಂದುರವರನ್ನು, ಉಪಾಧೀಕ್ಷಕರು ಮತ್ತು ಅವರ ಸಿಬ್ಬಂದಿ ಕರೆದುಕೊಂಡು ತಾಲೂಕು ಪಂಚಾಯತಿ ಕಚೇರಿಗೆ ಹೋದರು . ಫಿರ್ಯಾದಿ ಸಹ ಅವರ ಜೊತೆ ಹೋದ . ನಾನು ಜೀಪ್ ಬಳಿಯೇ ಇತರೇ ಸಿಬ್ಬಂದಿ ಜೊತೆ ಉಳಿದುಕೊಂಡೆ . ನಂತರ ಏನಾಯಿತು ಎಂದು ತಕ್ಷಣ ಗೊತ್ತಾಗಲಿಲ್ಲ. ಆದರೆ ಆರೋಪಿ ಗಣೇಶ ನಾಯ್ಕ ಲಂಚದ ಹಣ ಸ್ವೀಕರಿಸಿದ ಮೇಲೆ ಆರೋಪಿ ತಕ್ಷಣ ಸಿಗಲಿಲ್ಲ ತನ್ನ ಬೈಕ್ ನಲ್ಲಿ ಹೊರಟು ಹೋದ . ನಂತರ ಆರೋಪಿ ಯಾವುದೋ ದೇವಸ್ಥಾನದ ಬಳಿ ಕುಮಟಾದಲ್ಲಿ ಸಿಕ್ಕಿದ . ನಾವು ಆರೋಪಿ ಸಮೀಪ ಹೋಗುತ್ತಿದ್ದ ಹಾಗೆ ಆರೋಪಿ ತನ್ನ ಕಿಸೆಯಿಂದ ಹಣವನ್ನು ತೆಗೆದು ಎಸೆದು ಬಿಟ್ಟ . ಅದು ಗಿಡಗಂಟಿಯಲ್ಲಿ ಕತ್ತಲೆಯಲ್ಲಿ ಬಿದ್ದಿತ್ತು. ಆಗ ನನ್ನನ್ನು ಪಂಚ ಒಂದುರವರನ್ನು ಉಪಾಧೀಕ್ಷಕರು ಕರೆದುಕೊಂಡು ಹೋಗಿ ಅದನ್ನು ತೋರಿಸಿದರು . ಅಲ್ಲಿ ಬಿದ್ದಿದ್ದ ಹಣದ ನೋಟುಗಳನ್ನು ಪಂಚ ಒಂದುರವರ ಕಡೆಯಿಂದ ಎತ್ತಿಸಿದರು . ಆಗ ನಾನು ಮತ್ತು ಪಂಚ ಒಂದು ದರ್ಶನ ರವರು

ನಾವು ಹಿಂದೆ ಬರೆದುಕೊಂಡಿದ್ದ ನೋಟುಗಳ ಸಂಖ್ಯೆ ಜೊತೆ ಈ ನೋಟುಗಳ ಜೊತೆ ತಾಳೆ ಮಾಡಿದೆವು . ಅವು ತಾಳೆಯಾದವು . ತಾಳೆಯಾದ ತಕ್ಷಣ ಉಪಾಧೀಕ್ಷಕರು ಆ ನೋಟುಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು ಒಂದು ಲಕೋಟೆಯಲ್ಲಿ ಹಾಕಿ ಮೊಹರು ಹಾಕಿ ಜಪ್ತು ಮಾಡಿದರು . ನಾನು ಮತ್ತು ಪಂಚ ಒಂದುರವರು ಆ ಲಕೋಟೆ ಮೇಲೆ ಅಂಟಿಸಿದ ಚೀಟಿಗೆ ರುಜು ಮಾಡಿದೆವು . ನನಗೆ ಆರೋಪಿಯೇ ಗಣೇಶ ನಾಯ್ಕ ಎಂದು ಗೊತ್ತಿರಲಿಲ್ಲ . ಫಿರ್ಯಾದುದಾರರು ಆರೋಪಿಯನ್ನು ಗಣೇಶ ನಾಯ್ಕ ಎಂದು ನಮಗೆ ಪರಿಚಯ ಹೇಳಿದರು . ಈಗ ನ್ಯಾಯಾಲಯದ ಕಟಕಟೆಯಲ್ಲಿರುವ ಆರೋಪಿ ಅದೇ ಆರೋಪಿ ಗಣೇಶ ನಾಯ್ಕ ಆಗಿರುತ್ತಾನೆ. ನಾನು ಆರೋಪಿಯನ್ನು ಈಗ ಗುರುತಿಸಿರುತ್ತೇನೆ . ನಂತರ ಅಲ್ಲಿ ಕತ್ತಲೆ ಇದ್ದುದ್ದರಿಂದ ಆರೋಪಿಯನ್ನು, ನಮ್ಮನ್ನು ಉಪಾಧೀಕ್ಷಕರು ಕುಮಟಾದ ಪ್ರವಾಸಿ ಮಂದಿರಕ್ಕೆ ಕರೆದುಕೊಂಡು ಹೋದರು . ಆಗ ಫಿರ್ಯಾದುದಾರರು ನಮ್ಮ ಜೊತೆ ಇದ್ದರು .

ಮುಂದಿನ ಮುಖ್ಯ ವಿಚಾರಣೆಯನ್ನು ಮಧ್ಯಾಹ್ನ 2.45 ಗಂಟೆಗೆ ವಿಶೇಷ ಸರ್ಕಾರಿ ಅಭಿಯೋಜಕರ ಮೇರೆಗೆ ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ.

**ದಿನಾಂಕಃ 14-07-2022 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

2. ಆರೋಪಿಯನ್ನು ಹಿಡಿದುಕೊಂಡು ಕುಮಟಾ ಪ್ರವಾಸಿ ಮಂದಿರಕ್ಕೆ ಬಂದೆವು . ನಮ್ಮ ಜೊತೆಯಲ್ಲಿ ಫಿರ್ಯಾದುದಾರರ , ಉಪಾಧೀಕ್ಷಕರು ಮತ್ತು ಸಿಬ್ಬಂದಿ ಇದ್ದರು .ಅಲ್ಲಿ ಆರೋಪಿಯ ಕೈ ಬೆರಳುಗಳನ್ನು ರಾಸಾಯನಿಕ ದ್ರಾವಣ ತಯಾರಿಸಿ ಅದರಲ್ಲಿ ಅದ್ದಿ ತೊಳೆದರು. ಮೊದಲು ಬಲಗೈ ಬೆರಳನ್ನು ಆ ರೀತಿ ಅದ್ದಿ ತೊಳೆದರು. ನಂತರ ಬೇರೆ ಬಟ್ಟಲಿನಲ್ಲಿ ದ್ರಾವಣದಲ್ಲಿ ಎಡಗೈ ಬೆರಳನ್ನು ಅದ್ದಿ ತೊಳೆದರು . ಆ ಎರಡೂ ಬಟ್ಟಲಿನಲ್ಲಿ ಬಣ್ಣ ರಹಿತ ದ್ರಾವಣ ಕೈ ಬೆರಳುಗಳನ್ನು ಅದ್ದಿದ ಮೇಲೆ ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತು . ನಂತರ ಬೇರೆ ಬೇರೆ ಬಾಟಲಿಯಲ್ಲಿ ಆ ದ್ರಾವಣವನ್ನು ಹಾಕಿ ಮೊಹರು ಹಾಕಿ ಜಪ್ತು ಮಾಡಿದರು . ನಂತರ ಆರೋಪಿಗೆ ಬೇರೆ ಪ್ಯಾಂಟು ನೀಡಿ ಅವನು ಧರಿಸಿದ್ದ ಪ್ಯಾಂಟನ್ನು ಪಡೆದು ಆ ಪ್ಯಾಂಟಿನ ಬಲ ಕಿಸೆಯನ್ನು ಮತ್ತೊಂದು ಬಟ್ಟಲಿನಲ್ಲಿ ತಯಾರಿಸಿದ್ದ ದ್ರಾವಣದಲ್ಲಿ ಅದ್ದಿ ತೊಳೆದರು . ಆಗ ಆ ಬಣ್ಣ ರಹಿತ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು . ಆರೋಪಿಯಿಂದ ಉಪಾಧೀಕ್ಷಕರು ಒಂದು ಹೇಳಿಕೆಯನ್ನು ಪಡೆದರು . ಅದು ಲಿಖಿತವಾದ ಹೇಳಿಕೆಯಾಗಿತ್ತು. ಅದಕ್ಕೆ ನಾನು ರುಜು ಮಾಡಿರುತ್ತೇನೆ . ಅಲ್ಲಿ ನಡೆದ ನಡಾವಳಿ ಬಗ್ಗೆ ಪಂಚನಾಮೆಯನ್ನು ತಯಾರಿಸಿದರು . ಅದಕ್ಕೆ ನಾನು ರುಜು ಮಾಡಿದ್ದೇನೆ. ಫ್ರಾಸಾ-1 ರವರು ಮತ್ತು ಉಪಾಧೀಕ್ಷಕರು ಸಹ ಅದಕ್ಕೆ ರುಜು ಮಾಡಿದ್ದಾರೆ .

3. ಇದಾದ ಕೆಲವು ದಿನಗಳ ಬಳಿಕ ನಾನು ಪುನಃ ಲೋಕಾಯುಕ್ತ ಕಚೇರಿಗೆ ಹೋಗಿದ್ದೆ. ಅಲ್ಲಿ ಉಪಾಧೀಕ್ಷಕರು , ಫಿರ್ಯಾದುದಾರ ಮತ್ತು ಪಂಚ ಒಂದುರವರು ಹಾಜರಿದ್ದರು . ಅಲ್ಲಿ ಒಂದು ಸಿ.ಡಿ. ಹಚ್ಚಿದರು ಅದನ್ನು ಜಪ್ತು ಮಾಡಿದರು . ಅದರಲ್ಲಿ ಏನು ಸಂಭಾಷಣೆ ಇತ್ತು ಎಂದು ಈಗ ನೆನಪಿಲ್ಲ . ಜಪ್ತು ಮಾಡಿದ ಮೇಲೆ ಅದಕ್ಕೆ ನಾನು ರುಜು ಮಾಡಿದ್ದೇನೆ . ಅಲ್ಲಿ ಒಂದು ಪಂಚನಾಮೆಯನ್ನು ಮಾಡಿದರು . ಅದಕ್ಕೆ ರುಜು ಮಾಡಿದ್ದೇನೆ .

4. ಜಪ್ತು ಮಾಡಿರುವ ಎಲ್ಲಾ ಮಾಲುಗಳನ್ನು ನಾನು ಗುರುತಿಸುತ್ತೇನೆ . ಈಗ ನೋಡಿದ ಮು.ಮಾ. 1 ರಿಂದ 11 ಪ್ರಾಯೋಗಿಕ ಪಂಚನಾಮೆ ಮತ್ತು ಟ್ರ್ಯಾಪ್ ಕಾರ್ಯಾಚರಣೆ ಸಮಯದಲ್ಲಿ ಲೋಕಾಯುಕ್ತ ಪೊಲೀಸ್ ನವರು ಜಪ್ತು ಮಾಡಿರುತ್ತಾರೆ . ಅವುಗಳ ಮೇಲೆ ನನ್ನ ರುಜುಗಳು ಇವೆ . ಆ ರುಜುಗಳನ್ನು ಮು.ಮಾ.1(ಬಿ) ರಿಂದ 11(ಬಿ)

ಎಂದು ಗುರುತಿಸಲಾಯಿತು . ಆ ಬಾಟಲುಗಳಲ್ಲಿರುವ ದ್ರಾವಣ ಯಾವುದು ಎಂಬುದನ್ನು ಪಂಚನಾಮೆಯಲ್ಲಿ ವಿವರವಾಗಿ ಬರೆದಿದ್ದಾರೆ .

5. ಈಗ ನೋಡಿದ ದಾಖಲಾತಿ ನಿ.ಪಿ. 1 ಎಂದು ಗುರುತಾಗಿದ್ದು ಅದು ಪ್ರಾಯೋಗಿಕ ಪಂಚನಾಮೆಯಾಗಿದೆ. ಅದರಲ್ಲಿ 2 ನೇ ರುಜು ನನ್ನದಾಗಿದೆ. ನಿ.ಪಿ. 1(ಬಿ) ಎಂದು ಆ ರುಜುವನ್ನು ಗುರುತಿಸಲಾಯಿತು . ಈಗ ನೋಡಿದ ದಾಖಲಾತಿ ಟ್ರ್ಯಾಪ್ ಪಂಚನಾಮೆಯಾಗಿದೆ. ಅದರಲ್ಲಿ 2 ನೇ ರುಜು ನನ್ನದಾಗಿದೆ. ನಿ.ಪಿ. 2(ಬಿ) ಎಂದು ಸಾಕ್ಷಿಯ ರುಜುವನ್ನು ಗುರುತಿಸಲಾಯಿತು . ಈಗಾಗಲೇ ಆ ಪಂಚನಾಮೆಯನ್ನು ನಿ.ಪಿ. 2 ಎಂದು ಗುರುತಿಸಲಾಗಿದೆ. ನಿ.ಪಿ. 3 ಫಿರ್ಯಾದುದಾರರು ಸಲ್ಲಿಸಿದ ದೂರು ಆಗಿದೆ. ನಿ.ಪಿ. 4 ಜಪ್ತು ಪಂಚನಾಮೆ ಆಗಿದೆ. ನಿ.ಪಿ.4(ಬಿ) ನನ್ನ ರುಜು ಆಗಿದೆ . ನಿ.ಪಿ. 5 ಆರೋಪಿಯು ಉಪಾಧೀಕ್ಷಕರಿಗೆ ನೀಡಿದ ಲಿಖಿತ ವಿವರಣೆಯಾಗಿದೆ. ಅದರಲ್ಲಿ ಪ್ರತಿ ಪುಟದಲ್ಲಿ ನಾನು ರುಜು ಮಾಡಿದ್ದೇನೆ . ಅದರಲ್ಲಿ ಕೊನೆಯ ಪುಟದ ರುಜುವನ್ನು ನಿ .ಪಿ.5(ಸಿ) ಎಂದು ಗುರುತಿಸಲಾಯಿತು . ನಿ.ಪಿ. 6 ರಿಂದ 18 ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ತೆಗೆದ ಛಾಯಾ ಚಿತ್ರಗಳಾಗಿವೆ. ಅದರಲ್ಲಿ ಪ್ರತಿ ಪುಟದಲ್ಲಿ ನನ್ನ ರುಜು ಇವೆ . ನಿ.ಪಿ. 7(ಬಿ), 9(ಬಿ), 11(ಬಿ), 13(ಬಿ), 15(ಬಿ) 17(ಬಿ), 18(ಬಿ) ನನ್ನ ರುಜುಗಳಾಗಿವೆ. ನಿ.ಪಿ. 19 ರಿಂದ 36 ಟ್ರ್ಯಾಪ್ ಕಾರ್ಯಾಚರಣೆ ಸಮಯದಲ್ಲಿ ತೆಗೆದ ಛಾಯಾ ಚಿತ್ರಗಳು ಆಗಿವೆ . ಅದರಲ್ಲಿ ಪ್ರತಿ ಪುಟದಲ್ಲಿ ನನ್ನ ರುಜು ಇವೆ . ನಿ.ಪಿ. 20(ಬಿ), 22(ಬಿ), 24(ಬಿ), 26(ಬಿ), 28(ಬಿ), 30(ಬಿ), 32(ಬಿ), 34(ಬಿ),36(ಬಿ) ನನ್ನ ರುಜುಗಳಾಗಿವೆ .

**ಪಾಟೀ ಸವಾಲುಃ ಆರೋಪಿತರ ವಕೀಲರಾದ ಶ್ರೀ ಎನ್ ವಿ ಎನ್ ರವರಿಂದ**

ಪಾಟೀ ಸವಾಲಿಗೆ ಸಮಯ ಕೋರಿದ್ದಾರೆ . ಸಾಕ್ಷಿಗೆ ರೂ . 500/- ಭತ್ಯೆ ಪಾವತಿ ಮಾಡಿದ್ದಾರೆ. ಪಾಟೀ ಸವಾಲನ್ನು ಮುಂದೂಡಲಾಗಿದೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ.